ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು

ಸಿ.ಸಿ.ನಂ.**2869/2025**

ದಿನಾಂಕಃ**17.06.2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

| | | |
|---|---|---|
| ಸಾಕ್ಷಿಯ ಹೆಸರು | ಕಿರಣ್ | ಚಾಸಾ-3, ಪ್ರಾಸಾ-3 |
| ತಂದೆಯ ಹೆಸರು | ಮಂಜುನಾಥ | |
| ವಯಸ್ಸು | 21 ವರ್ಷ | |
| ಉದ್ಯೋಗ | ಚಾಲಕ ವೃತ್ತಿ | |
| ವಾಸ | ಲಕ್ಷ್ಮೀಪುರ ಗ್ರಾಮ | |

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ನನಗೆ ಚಾಸಾ 2, 4 ರವರ ಪರಿಚಯದೆ. ಈಗ ನೋಡುತ್ತಿರುವ ದಾಖಲೆಗಳಲ್ಲಿನ ಸಹಿ ನನ್ನದು, ಸದರಿ ದಾಖಲೆಗಳು ಪೊಲೀಸ್ ನೋಟೀಸ್ ಆಗಿದ್ದು ಅದನ್ನು 13 ಮತ್ತು 14 ಎಂದು ಸಾಕ್ಷಿಯ ಸಹಿಯನ್ನು ನಿಪಿ13 ಎ ಮತ್ತು 14 ಎ ಎಂದು ಗುರುತಿಸಲಾಯಿತು. ನಿಪಿ 13, 14 ರ ನೋಟೀಸ್ ಅನ್ನು ದಿಃ17.03.2025 ರಂದು ಪೊಲೀಸರು ನೀಡಿರುತ್ತಾರೆ.

ನಿಪಿ 1, 2 ರಲ್ಲಿರುವ ಸಹಿಯನ್ನು ದಿಃ17.03.2025 ರಂದು ಮಧ್ಯಾಹ್ನ ಸು.2.15 ರಿಂದ 2.45 ರ ಸಮಯದಲ್ಲಿ ಅಪಘಾತದ ಸ್ಥಳದಲ್ಲಿ ಮಹಜರ್ ಮಾಡಿದ ನಿಮಿತ್ತ ಸಹಿ ಮಾಡಿರುತ್ತೇನೆ. ಅಪಘಾತವಾದ ಸ್ಥಳವನ್ನು ಚಾಸಾ 4 ರವರು ತೋರಿಸಿದ್ದು, ನನ್ನ ಹಾಗೂ ಚಾಸಾ 2, 4 ರವರ ಸಮಕ್ಷಮ ಸದರಿ ಮಹಜರ್ ಮಾಡಲಾಗಿದೆ. ನಿಪಿ 3 ರಿಂದ 6 ರ ಪೋಟೋಗಳನ್ನು ಸದರಿ ವೇಳೆಯಲ್ಲಿ ತೆಗೆಯಲಾಗಿತ್ತು.

ನಿಪಿ 7 ನ್ನು ಠಾಣೆಯಲ್ಲಿ ವಾಹನ ಅಮಾನತ್ತು ಪಡಿಸಿಕೊಳ್ಳುವಾಗ ಮಧ್ಯಾಹ್ನ 2.50 ರಿಂದ 3.20 ರ ಸಮಯದಲ್ಲಿ ದಿಃ17.03.2025 ರಂದೇ ನನ್ನ, ಚಾಸಾ 2, 4 ರವರ ಸಮಕ್ಷಮ ಮಹಜರ್ ಮಾಡಿ ಸಹಿ ಪಡೆದಿರುತ್ತಾರೆ. ಸದರಿ ವೇಳೆಯಲ್ಲಿ ನಿಪಿ 10 ಮತ್ತು 11 ರಲ್ಲಿ ಕಾಣುವ ವಾಹನಗಳನ್ನು ಅಮಾನತ್ತು ಪಡಿಸಿಕೊಂಡು ನಿಪಿ 8 ಮತ್ತು 9 ರಂತೆ ಪೊಟೋ ತೆಗೆಯಲಾಗಿದೆ.

<u>ಪಾಟೀಸವಾಲುಃ ಆರೋಪಿ ಪರ ಶ್ರೀ ಬಿ ಹೆಚ್ ಆರ್ ವಕೀಲರಿಂದಃ</u>-

ಆರೋಪಿ ಪರ ವಕೀಲರು ಸಮಯವಕಾಶ ಕೋರಿದ್ದು, ಆದರೆ ಪ್ರಕರಣಗಳನ್ನು ಸಾಕ್ಷಿ ಬಂದ ದಿನವೇ ಪಾಟೀ ಸವಾಲು ಮಾಡುವ ನಿಯಮವಿದ್ದಾಗಿಯೂ ಸೂಕ್ತ ಕಾರಣ ನೀಡದೆ ಕಾಲವಕಾಶ ಕೋರಿರುವುದು ಸಮಂಜಸವಲ್ಲವೆಂದು ಪರಿಗಣಿಸಿ ಮನವಿಯನ್ನು ತಿರಸ್ಕರಿಸಲಾಯಿತು ಹಾಗೂ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.

<u>ಮರು ವಿಚಾರಣೆ ಃ ಇಲ್ಲ</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಒ,

ಸಹಿ/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.